# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 15-06-2015ರ ನಡವಳಿಗಳು

## ವಿಷಯದ ಸಂಖ್ಯೆ : 84 / 2015-16

ವಿಷಯ: ಕಾರ್ಯಪಾಲಕ ಅಭಿಯಂತರರು ಬಸವನಗುಡಿ ವಿಭಾಗದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಆಯವ್ಯಯದಲ್ಲಿ ಅನುದಾನವನ್ನು ಅಳವಡಿಸಿಕೊಳ್ಳುವ ಬಗ್ಗೆ

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರು ತಮ್ಮ ವಿಭಾಗ ವ್ಯಾಪ್ತಿಯಲ್ಲಿನ ಒಟ್ಟು 8 ಕಾಮಗಾರಿಗಳ ಒಟ್ಟು ರೂ.150.00 ಲಕ್ಷಗಳ ಮೊತ್ತದ ಕಾಮಗಾರಿಗೆ ಕಾಮಗಾರಿ ಸಂಖ್ಯೆ ನೀಡುವಂತೆ ಕೋರಿ ಮುಖ್ಯ ಅಭಿಯಂತರರು (ದಕ್ಷಿಣ) ರವರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿನ ಮಾನ್ಯ ಶಾಸಕರ ಅನುದಾನದಲ್ಲಿ ಕೈಗೊಳ್ಳುವುದಾಗಿ ಪ್ರಸ್ತಾಪಿಸಿದ್ದು, ಕಾಮಗಾರಿಗಳ ವಿವರಗಳು ಕೆಳಕಂಡಂತಿದೆ.

| ಕ್ರ.ಸಂ. | ಕಾಮಗಾರಿಯ ವಿವರಗಳು | ಮೊತ್ತ |
|---|---|---|
| 1 | ಗಿರಿನಗರ ಉಪವಿಭಾಗದ ವಾರ್ಡ್-162, 163 ಮತ್ತು 164ರಲ್ಲಿ ಕೊಳವೆ ಬಾವಿಯನ್ನು ಕೊರೆದು ಕಿರುನೀರು ಸರಬರಾಜು ಯೋಜನೆ ಕಾರ್ಯರೂಪಕ್ಕೆ ತರುವ ಕಾಮಗಾರಿ | 20.00 |
| 2 | ಬಸವನಗುಡಿ ಉಪವಿಭಾಗದ ವಾರ್ಡ್-164 ಮತ್ತು 156ರಲ್ಲಿ ಕೊಳವೆ ಬಾವಿ ಕೊರೆದು ಕಿರುನೀರು ಸರಬರಾಜು ಯೋಜನೆ ಕಾರ್ಯರೂಪಕ್ಕೆ ತರುವ ಕಾಮಗಾರಿ | 15.00 |
| 3 | ವಾರ್ಡ್-156 ಶ್ರೀನಗರ 50 ಅಡಿ ರಸ್ತೆಯಲ್ಲಿ ಸೆಕೆಂಡರಿ ಮಳೆನೀರು ಚರಂಡಿ ಅಭಿವೃದ್ಧಿ ಪಡಿಸಿ ಆರ್.ಸಿ.ಸಿ ಛಾವಣಿ ಹಾಕಿ, ಪಾದಚಾರಿ ರಸ್ತೆ ನಿರ್ಮಾಣ ಕಾಮಗಾರಿ (ಉಳಿಕೆ ಕೆಲಸ) | 36.00 |
| 4 | ವಾರ್ಡ್-156 ಶ್ರೀನಗರ ಬೃಂದಾವನ ನಗರದಲ್ಲಿ ಹಾದು ಹೋಗಿ ವೃಷಭಾವತಿ ನಾಲೆ ಸೇರುವ ಸೆಕೆಂಡರಿ ಮಳೆನೀರು ಚರಂಡಿ ಅಭಿವೃದ್ಧಿ ಪಡಿಸಿ ಆರ್.ಸಿ.ಸಿ ಛಾವಣಿ ಹಾಕಿ, ಪಾದಚಾರಿ ರಸ್ತೆ ನಿರ್ಮಾಣ ಕಾಮಗಾರಿ (ಉಳಿಕೆ ಕೆಲಸ) | 20.00 |
| 5 | ವಾರ್ಡ್-162 ಗಿರಿನಗರ ಉಪವಿಭಾಗ ಬಿ.ಎಸ್.ಕೆ. 3ನೇ ಹಂತ, ಗಿರಿನಗರ 14ನೇ ಅಡ್ಡರಸ್ತೆ ರಸ್ತೆಬದಿ ಚರಂಡಿ ಅಭಿವೃದ್ಧಿ ಹಾಗೂ 14 ಎ ಅಡ್ಡರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿರುವ ಕಾಮಗಾರಿ | 20.00 |
| 6 | ವಾರ್ಡ್-164 ವಿದ್ಯಾಪೀಠ ಐಟಿಐ ಬಡಾವಣೆ ಹಾಗೂ ಬಾಲಾಜಿ ಬಡಾವಣೆಯ ಉಳಿಕೆ ಕಚ್ಚಾರಸ್ತೆಗಳಿಗೆ ಕಾಂಕ್ರಿಟ್ ರಸ್ತೆ ಮಾಡಿ ಅಭಿವೃದ್ಧಿ ಪಡಿಸುವ ಕಾಮಗಾರಿ | 15.00 |
| 7 | ಗಿರಿನಗರ ಮತ್ತು ಬಸವನಗುಡಿ ಉಪ ವಿಭಾಗದ ವಾರ್ಡ್-156 ಶ್ರೀನಗರ, 164-ವಿದ್ಯಾಪೀಠದ ಹಾಲಿ ಕಾಂಕ್ರೀಟ್ ರಸ್ತೆ ಅಗೆದು ಒಳಚರಂಡಿ ಕೊಳವೆ ಅಳವಡಿಸಲು ಅಗೆದಿರುವ ಭಾಗದ ದುರಸ್ತಿ ಕಾಮಗಾರಿ | 14.00 |
| 8 | ವಾರ್ಡ್ 156 ಶ್ರೀನಗರ ಪೈಪ್‌ಲೈನ್ ರಸ್ತೆ ನರಿಹಳ್ಳ ಪಾಲಿಕೆಯ ಸ್ಥಳದಲ್ಲಿ ಅಂಗನವಾಡಿ ನಿರ್ಮಾಣ ಮಾಡುವ ಕಾಮಗಾರಿ | 10.00 |
| | **ಒಟ್ಟು ಮೊತ್ತ** | **150.00** |

ದಿನಾಂಕ:08-04-2015ರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು 8 ಕಾಮಗಾರಿಗಳ ಒಟ್ಟು ಮೊತ್ತ ರೂ.150.00 ಲಕ್ಷಗಳಿಗೆ ಅನುಮೋದನೆಯನ್ನು ನೀಡಿ ಷರತ್ತುಗಳ ಸಂಖ್ಯೆ 7ರಲ್ಲಿ ಕಾಮಗಾರಿ ಪೂರ್ಣಗೊಂಡ ನಂತರ ಅನುದಾನ ಬಿಡುಗಡೆಗೊಳಿಸಲಾಗುವುದು ಹಾಗೂ ಕಾಮಗಾರಿ ಪೂರ್ಣಗೊಂಡ ಬಗ್ಗೆ ಉಸ್ತುವಾರಿ ವಹಿಸಿಕೊಂಡಿರುವ ಅನುಷ್ಠಾನಾಧಿಕಾರಿಯವರು ಈ ಬಗ್ಗೆ ದೃಢೀಕರಿಸತಕ್ಕದ್ದು ಎಂದು ತಿಳಿಸಲಾಗಿದೆ.

.........................2

ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಆಯವ್ಯಯ ಲೆಕ್ಕಶೀರ್ಷಿಕೆ ಶಾಸಕರ ಅನುದಾನದ ಕಾಮಗಾರಿಗಳು ಪಿ ಸಂಖ್ಯೆ 583 ಅಡಿ ಕಾಮಗಾರಿ ಸಂಖ್ಯೆ ನೀಡಬೇಕಾಗಿರುತ್ತದೆ. ಸದರಿ ಕಾಮಗಾರಿಗಳು ಸರ್ಕಾರದ ಅನುದಾನದ ಕಾಮಗಾರಿಯಾಗಿದ್ದು, ಸರ್ಕಾರಕ್ಕೆ ಅನುಮೋದನೆ ಸಲ್ಲಿಸಲಾದ ಪಾಲಿಕೆಯ 2015-16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 583 ರಲ್ಲಿ ರೂ.1.00 ಲಕ್ಷಗಳನ್ನು ಸಾಂಕೇತಿಕವಾಗಿ ಮೀಸಲಿರಿಸಿದೆ.

2015-16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ ಸಂಖ್ಯೆ 583ಕ್ಕೆ ರೂ.150.00 ಲಕ್ಷಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆ ನೀಡಬೇಕಾಗಿರುತ್ತದೆ. ಪಾಲಿಕೆಯ 2015-16ನೇ ಸಾಲಿನ ಆಯವ್ಯಯವನ್ನು ಸರ್ಕಾರವು ಅನುಮೋದಿಸಿದ್ದು, ಆಯವ್ಯಯವನ್ನು ಮುದ್ರಿಸಿ ವಿತರಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ವಹಿಸಲು ಉದ್ದೇಶಿಸಿರುವ ಮೇಲ್ಕಂಡ 8 ಕಾಮಗಾರಿಗಳ ಒಟ್ಟು ಮೊತ್ತ ರೂ. 150.00 ಲಕ್ಷಗಳಿಗೆ 2015-16ನೇ ಸಾಲಿನ ಆಯವಯಯ ಲೆಕ್ಕ ಶೀರ್ಷಿಕೆ ಪಿ ಸಂಖ್ಯೆ 583ರಲ್ಲಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು, ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-06-2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು